**ಎಂವಿಸಿಃ 564/2024 ಪಿಡಬ್ಲ್ಯೂ: 1 ಸಿದ್ದು**

**ಸಾಕ್ಷಿಯನ್ನು ದಿಃ 25.02.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ವಕೀಲರಿಂದಃ**

ನಾನು ಮೋಟಾರ್ ಸೈಕಲ್ ನಲ್ಲಿ ಹಿಂಬದಿ ಸವಾರನಾಗಿ ಹೋಗುತ್ತಿದ್ದೆ. ನನಗೆ ಅಪಘಾತ ಪಡಿಸಿತು ಎನ್ನಲಾದ ವಾಹನ ಲಾರಿ ಇರುತ್ತದೆ. ಅಪಘಾತ ಆದ ಸ್ಥಳ ಗನ್ ಹೌಸ್ ಬಳಿ ಆಗಿರುತ್ತದೆ. ಸದರಿ ರಸ್ತೆ ಬೆಂಗಳೂರು–ನೀಲಗಿರಿ ಹೆದ್ದಾರಿ ಎಂದರೆ ಸರಿ. ಸದರಿ ರಸ್ತೆಯಲ್ಲಿ ಹೆಚ್ಚು ವಾಹನ ಸಂಚಾರ ಇರುತ್ತದೆ ಎಂದರೆ ಸರಿ. ಅಪಘಾತ ಬೆಳಗಿನ ಜಾವ 4.00 ಗಂಟೆಗೆ ಆಗಿರುತ್ತದೆ. ಬೆಳಗಿನ ಜಾವ ಆದ ಕಾರಣ ಹೆಚ್ಚು ವಾಹನ ಸಂಚಾರ ಇರುವುದಿಲ್ಲ ಎಂದು ನನ್ನ ಅಣ್ಣ ರವಿಕುಮಾರ್ ಅತಿವೇಗವಾಗಿ ವಾಹನ ಚಾಲನೆ ಮಾಡಿಕೊಂಡು ಹೆಲ್ಮೆಟ್ ಧರಿಸದೇ ಇರುವ ಕಾರಣ ಅಪಘಾತ ಆಗಿರುತ್ತದೆ ಎಂದು ಪೋಲೀಸರು ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿ.

ಮುಂದುವರೆದು ಸಾಕ್ಷಿಯು ರಸ್ತೆ ಕಾಮಗಾರಿ ನಡೆಯುತ್ತಿದ್ದ ಕಾರಣ ನಾವು ಬಲಕ್ಕೆ ತೆಗೆದುಕೊಂಡು ವಾಪಸ್ ಬರುವಾಗ ನಮಗೆ ಡಿಕ್ಕಿ ಪಡಿಸಿರುತ್ತಾನೆ ಎಂದು ಉತ್ತರಿಸಿರುತ್ತಾರೆ. ರಸ್ತೆ ಕಾಮಗಾರಿ ನಡೆಯುತ್ತಿತ್ತು ಎಂದು ಪೋಲೀಸ್ ದಾಖಲೆಗಳಲ್ಲಿ, ಪ್ರಮಾಣ ಪತ್ರದಲ್ಲಿ ಮತ್ತು ಅರ್ಜಿಯಲ್ಲಿ ಬರೆದಿರುವುದಿಲ್ಲ ಎಂದರೆ ಸರಿ. ನಿಪಿ. 4 ಸ್ಥಳ ನಕ್ಷೆ ಸರಿಯಾಗಿದೆಯಾ ಎಂದರೆ ಸರಿಯಾಗಿದೆ ಎಂದು ಉತ್ತರಿಸಿರುತ್ತಾರೆ. ನಿಪಿ. 3 ಮತ್ತು 4 ರಲ್ಲಿ ರಸ್ತೆ ಕಾಮಗಾರಿ ನಡೆಯುತ್ತಿದೆ ಎಂದು ನಮೂದಾಗಿರುವುದಿಲ್ಲ ಎಂದರೆ ಸರಿ. ನನ್ನ ಅಣ್ಣನ ತಪ್ಪು ಇದೆ ಎಂದು ಗೊತ್ತಿರುವ ಕಾರಣ ಪರಿಹಾರ ಹೆಚ್ಚಾಗಿ ಪಡೆಯಲು ನನ್ನ ಅಣ್ಣನ ತಪ್ಪು ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ. 5 ರ ಪ್ರಕಾರ ವಾಹನಗಳಿಗೆ ಎಲ್ಲೆಲ್ಲಿ ಜಖಂ ಆಗಿದೆ ಎಂದು ನಮೂದಾಗಿರುವ ವಿಷಯ ನನಗೆ ಗೊತ್ತಿರುವುದಿಲ್ಲ. ಲಾರಿಯ ಹಿಂಭಾಗದ ಬಲಭಾಗದ ಮಡ್ ಗಾರ್ಡ್ ಗೆ ಜಖಂ ಆಗಿದ್ದು, ನಮ್ಮ ವಾಹನದ ಮುಂಭಾಗಕ್ಕೆ ಜಖಂ ಆಗಿದೆ ಎಂದು ನಿಪಿ. 5 ರಲ್ಲಿ ನಮೂದಾಗಿದೆ ಎಂದರೆ ಸರಿಯಲ್ಲ. ನಮ್ಮ ವಾಹನ ಸಂಪೂರ್ಣವಾಗಿ ನುಜ್ಜುಗುಜ್ಜಾಗಿರುತ್ತದೆ. ಪೋಲೀಸ್ ದಾಖಲೆಗಳನ್ನು ನೋಡಿದಾಗ ನನ್ನ ಅಣ್ಣನ ಅಜಾಗರೂಕತೆ ಕಂಡು ಬರುತ್ತದೆ ಎಂದರೆ ಮೊದಲು ಸರಿ ಎಂದು ಹೇಳಿ ಆನಂತರ ಇಲ್ಲ ಎಂದು ಉತ್ತರಿಸಿರುತ್ತಾರೆ. ಮೆಡಿಕಲ್ ದಾಖಲೆಯ ಪ್ರಕಾರ ಎರಡು ವಾಹನಗಳ ನಡುವೆ ಅಪಘಾತ ಆಗಿರುತ್ತದೆ ಎಂದು ನಮೂದಾಗಿರುತ್ತದೆ ಎಂದರೆ ಸರಿ. ನನ್ನ ಅಣ್ಣನ ಮೇಲೆ ಸಲ್ಲಿಸಿರುವ ದೋಷರೋಪಣಾ ಪಟ್ಟಿಯ ಮೇಲೆ ತಿದ್ದುಪಡಿ ಕೋರಿ ಅರ್ಜಿ ಸಲ್ಲಿಸಿರುವುದಿಲ್ಲ.

ಅಪಘಾತ ಆದ ತಕ್ಷಣ ಕೆ.ಆರ್. ಆಸ್ಪತ್ರೆಗೆ ಹೋಗಿ ಆನಂತರ ಜೆ.ಎಸ್.ಎಸ್ ಆಸ್ಪತ್ರೆಗೆ ಹೋಗಿರುತ್ತೇವೆ. ನಿಪಿ. 8 ರಲ್ಲಿ ಆರ್.ಟಿ.ಎ ಎಂದು ಬರೆದಿರುತ್ತಾರೆ ಎಂದರೆ ಆ ಬಗ್ಗೆ ಗೊತ್ತಿಲ್ಲ. ಈಗ ನನಗೆ ಆದ ಗಾಯಗಳು ವಾಸಿಯಾಗಿದೆ ಎಂದರೆ ಸರಿ. ಮುಂದುವರೆದು ಸಾಕ್ಷಿಯು ತಲೆನೋವು ಇದೆ ಎಂದು ಉತ್ತರಿಸಿರುತ್ತಾರೆ. ಅಪಘಾತ ಆದ ದಿನ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿ. ಕೊನೆಯಬಾರಿಗೆ ಹೋದ ತಿಂಗಳು ಆಸ್ಪತ್ರೆಗೆ ಹೋಗಿರುತ್ತೇನೆ. ವೈಧ್ಯರ ಮುಂದೆ ದ್ವಿಚಕ್ರ ವಾಹನದಲ್ಲಿ ಸ್ಕಿಡ್ ಆಗಿ ಬಿದ್ದಿರುತ್ತೇವೆ ಎಂದು ನಿಪಿ. 12 ರಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ಬಳಿ ಇರುವ ವೈಧ್ಯಕೀಯ ದಾಖಲೆಗಳನ್ನೆಲ್ಲಾ ಹಾಜರು ಪಡಿಸಿರುತ್ತೇನೆ. 2025 ನೇ ಇಸವಿಯಲ್ಲಿ ನಾನು ವೈಧ್ಯರ ಬಳಿ ಚಿಕಿತ್ಸೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೆ ಆದ ಗಾಯಗಳು ವಾಸಿಯಾಗಿ ನಾನು ಸಹಜ ಸ್ಥಿತಿಯಲ್ಲಿದ್ದೇನೆ ಎಂದರೆ ಸರಿಯಲ್ಲ. ತರಕಾರಿ ವ್ಯಾಪಾರದಿಂದ ತಿಂಗಳಿಗೆ ರೂ. 30,000/- ಸಂಪಾದನೆ ಮಾಡುತ್ತಿದ್ದೆ ಎಂದು ಮತ್ತು ಕೆಲಸದ ಬಗ್ಗೆ ತೋರಿಸಲು ದಾಖಲೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ನನಗೆ ಶ್ರಸ್ತ ಚಿಕಿತ್ಸೆ ಮಾಡಿರುತ್ತಾರೆ. ಔಷಧಿ ಪಾವತಿ ರಶೀದಿಗಳಲ್ಲಿ ಕೆಲವೊಂದು ರಶೀದಿಗಳಲ್ಲಿ ನನ್ನ ಹೆಸರು ಇಲ್ಲದೇ ಇರುವ ಕಾರಣ ಸದರಿ ಬಿಲ್ಲುಗಳು ನನಗೆ ಸಂಬಂಧಪಟ್ಟದ್ದಲ್ಲ ಎಂದರೆ ಸರಿಯಲ್ಲ. ನಿಪಿ. 10ರ ಪ್ರಕಾರ ನನಗೆ ಯಾವುದೇ ಶ್ರಸ್ತ ಚಿಕಿತ್ಸೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಹೇಳಿರುವ ತೊಂದರೆಗಳು ಇಲ್ಲ ಎಂದರೆ ಸರಿಯಲ್ಲ. ತಲೆನೋವು ಮತ್ತು ತಲೆಸುತ್ತು ಹಾಗಾಗ ಬರುತ್ತದೆ ಎಂದು ಉತ್ತರಿಸಿರುತ್ತಾರೆ. ಅಪಘಾತ ನನ್ನ ಅಣ್ಣನ ತಪ್ಪಿನಿಂದ ಆದ ಕಾರಣ ನಾನು ಕೇಳಿರುವಷ್ಟು ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರಕ್ಕಾಗಿ ನನ್ನ ಅಣ್ಣನ ತಪ್ಪು ಇರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ., ಮೈಸೂರು.